

# ತೇಲುವ ಅಮರಾವತಿಯಲ್ಲಿ ದೇಶಾಂತರದ ಸುತ್ತಾಟ

**ಎಲ್ಲ ದೇಶಗಳ ಎಲ್ಲ ವಯೋಮಾನದ ಜನರನ್ನು ಭೇಟಿಯಾಗಬೇಕೆಂದರೆ ಅದು ಹಡಗಿನ ಪ್ರವಾಸವೇ ಆಗಬೇಕು. ಇದೊಂದು ಮಿನಿ ಜಗತ್ತು. ಇಲ್ಲಿ ಪರಿಚಯವಾಗುವ ಭಿನ್ನವಿಭಿನ್ನ ಮುಖಗಳು ನಮ್ಮನ್ನು ವಿಶ್ವಮಾನವರನ್ನಾಗಿಸುತ್ತವೆ.**

ಚಿತ್ರ– ಲೇಖನ: **ಪದ್ಮಶ್ರೀ ರವಿಕಿರಣ್**

ಅಮೆರಿಕದಲ್ಲಿ ಸಾಮಾನ್ಯವಾಗಿ ಆರು ತಿಂಗಳು ಹಿಮಪಾತ. ಈ ಕಾರಣದಿಂದಲೇ ಕೆಲಸ ಇಲ್ಲದವರು ಒಂದರ್ಥದಲ್ಲಿ ಸ್ವಯಂ ಗೃಹಬಂಧನಕ್ಕೆ ಒಳಗಾಗುತ್ತಾರೆ. ಮೈ –ಮನ ಮರಗಟ್ಟಿಸುವ ಹೊರಗಿನ ಚಳಿ ನೆನಪಿಸಿಕೊಂಡೇ ನನ್ನಂತಹವರು ಅಕ್ಷರಶಃ ಮರುಟಿದ ಕೋಲಿನಂತಾಗುತ್ತಾರೆ. ಭಾರತೀಯ ಸಿಲಿಕಾನ್ ಸಿಟಿಯಿಂದ ಅಮೆರಿಕಕ್ಕೆ ಬಂದವರು ಏನಿದ್ದರೂ ಮನೆಯ ಒಳಗಡೆಯೇ ಪ್ರವಾಸದ ಕನಸು ಕಂಡು, ದಿನ ದೂಡಬೇಕು. ಸಾಮಾನ್ಯವಾಗಿ ಮಳೆಗಾಲ ಮತ್ತು ಬೇಸಿಗೆಕಾಲ ಇಲ್ಲಿ ಪ್ರವಾಸಕ್ಕೆ ಸೂಕ್ತ ಸಮಯ. ಇಲ್ಲಿನವರಂತೂ ಚಳಿಯ ಹೊಡೆತ ತಪ್ಪಿಸಲು ಆಗಾಗ್ಗೆ ಕೆರಿಬಿಯನ್ ಪ್ರವಾಸಕ್ಕೆ ತೆರಳಿದರೆ, ಕ್ರಿಸ್‌ಮಸ್ ದೀರ್ಘ ರಜೆಯಲ್ಲಿ ಐಶಾರಾಮಿ ಹಡಗಿನಲ್ಲಿ ಪ್ರವಾಸಕ್ಕೆ ಹೋಗೋದನ್ನು ಸಂಪ್ರದಾಯವಾಗಿ ಉಳಿಸಿಕೊಂಡಿದ್ದಾರೆ.

ಕಳೆದ ಎಂಟು ವರ್ಷಗಳಿಂದ ಅಮೆರಿಕದಲ್ಲಿ ನೆಲೆಸಿರುವ ನನ್ನ ಪತಿಗೂ ಐಶಾರಾಮಿ ಹಡಗಿನಲ್ಲಿ ಪ್ರಯಾಣಿಸಬೇಕೆಂಬುದು ಬಹುದಿನಗಳ ಕನಸಾಗಿತ್ತು. ಮದುವೆಯಾಗಿ ನಾಲ್ಕು ವರ್ಷದ ಬಳಿಕವೂ ಅದಕ್ಕೆ ಮಹೂರ್ತ ಕೂಡಿಬಂದಿರಲಿಲ್ಲ. ಆದರೆ ಈ ಸಲ ಹೋಗಲೇಬೇಕೆಂದು ನಿರ್ಧರಿಸಿಯಾಗಿತ್ತು.

ಭಾರತಕ್ಕೆ ಹೋಲಿಸಿದರೆ ಯೂರೋಪ್ ಮತ್ತು ಅಮೆರಿಕದಲ್ಲಿ ಹಡಗು ಪ್ರವಾಸಕ್ಕೆ ಹೆಚ್ಚು ಆಯ್ಕೆಗಳಿವೆ. ನಾವು ಆಯ್ಕೆ ಮಾಡಿಕೊಂಡಿದ್ದು ಹೈಟಿ ಮೂಲಕ ಜಮೈಕಾ, ಗ್ರ್ಯಾಂಡ್ ಕೇಮನ್ ದ್ವೀಪ, ಅಲ್ಲಿಂದ ಮೆಕ್ಸಿಕೋಗೆ ತೆರಳಿ ಮತ್ತೆ ವಾಪಸಾಗುವ ಮಾರ್ಗ. ಮೂರು ತಿಂಗಳ ಮುಂಚೆಯೇ ರಾಯಲ್